# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/1649/2018/ಎಆರ್‌ಎಲ್‌ಓ-5

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ:14/08/2020

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3)ರ ಅನ್ವಯ ವರದಿ*

ವಿಷಯ: ಶ್ರೀ. ಸಿದ್ದರಾಜು ಬಿ.ಎನ್, ಕರ ವಸೂಲಿಗಾರರು, ಟಿ.ಬೇಗೂರು ಗ್ರಾಮ ಪಂಚಾಯಿತಿ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ 2. ಶ್ರೀ. ಕುಮಾರ್, ಅಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಟಿ.ಬೇಗೂರು ಗ್ರಾಮ ಪಂಚಾಯಿತಿ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು. ಪ್ರಸ್ತುತ ಪಿ.ಡಿ.ಓ, ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ಎಸಗಿದ ದುರ್ವರ್ತನೆಯ ಕುರಿತು.

****

ದೂರುದಾರರಾದ ಶ್ರೀಮತಿ. ರೇಖಾ.ಸಿ, ಅಧ್ಯಕ್ಷರು, ಟಿ. ಬೇಗೂರು ಗ್ರಾಮ ಪಂಚಾಯಿತಿ, ಟಿ.ಬೇಗೂರು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ. ಸಿದ್ದರಾಜು ಬಿ.ಎನ್, ಕರ ವಸೂಲಿಗಾರರು, ಟಿ.ಬೇಗೂರು ಗ್ರಾಮ ಪಂಚಾಯಿತಿ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ 2. ಶ್ರೀ. ಕುಮಾರ್, ಅಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಟಿ.ಬೇಗೂರು

ಗ್ರಾಮ ಪಂಚಾಯಿತಿ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು. ಪ್ರಸ್ತುತ ಪಿ.ಡಿ.ಓ, ಬಾಶೆಟ್ಟಳ್ಳಿ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಎದುರುದಾರ ನಂ. 1 ಮತ್ತು 2 ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

2. ದೂರುದಾರರು ತಮ್ಮ ದೂರಿನಲ್ಲಿ, ಟಿ. ಬೇಗೂರು ಗ್ರಾಮ ಪಂಚಾಯಿತಿಗೆ ಸೇರಿದ ಮೊಳೋನಾಗತಿಹಳ್ಳಿ ಗ್ರಾಮದ ಸರ್ವೆ ನಂ. 57/8ರಲ್ಲಿ 2 ಎಕರೆ ಜಮೀನು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿದ್ದು, ಸದರಿ ಜಮೀನಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯಿಂದ ಖಾತೆ ಹಾಗೂ ಕಂದಾಯ, ಕಟ್ಟಡ ನಕ್ಷೆ, ಎನ್.ಓ.ಸಿ, ಜನರಲ್ ಲೈಸೆನ್ಸ್ ಮತ್ತು ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ. ಈ ಜಮೀನಿಗೆ ಸಂಬಂಧಪಟ್ಟಂತೆ ಶ್ರೀ. ಕೆ.ಬಿ. ಜಗದೀಶ್ ಬಿನ್ ಶ್ರೀ. ಕೆ.ಬಿ. ಬೈರಣ್ಣರವರಿಗೆ ದಿ. 02/03/2017ರಂದು ಟಿ.ಬೇಗೂರು ಗ್ರಾಮ ಪಂಚಾಯಿತಿಯಿಂದ ರಶೀದಿ ನಂಬರ್ 683651ರಂತೆ ಕಟ್ಟಡ ಅನುಮತಿ ಪತ್ರ, ಕಂದಾಯ ಖಾತಾ ನಂಬರ್ 96/29/57/8 ಎಂದು ನಮೂದು ಮಾಡಿ ರೂ. 60,000/- ಗಳಿಗೆ ರಶೀದಿ ನೀಡಿದ್ದು, ಆದರೆ ಪಂಚಾಯಿತಿಯ ಯಾವುದೇ ದಾಖಲೆಗಳಲ್ಲಿ ಸದರಿ ರಶೀದಿಯ ಬಗ್ಗೆ ನಮೂದು ಮಾಡಿರುವುದಿಲ್ಲ ಮತ್ತು ಸದರಿ ರಶೀದಿಯಲ್ಲಿ ಪಡೆದಿರುವ ಹಣವನ್ನು ಪಂಚಾಯಿತಿಗೆ ಜಮಾ ಮಾಡಿರುವುದಿಲ್ಲ. ಇದಲ್ಲದೆ ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರುಗಳ ಗಮನಕ್ಕೆ ಬರದಂತೆ ನಕಲು ದಾಖಲೆಗಳನ್ನು ಸೃಷ್ಟಿಸಿಕೊಂಡಿರುವುದು ಕಂಡು ಬಂದಿರುತ್ತದೆ. ದಿ. 14/11/2017ರಂದು ಸಾಮಾನ್ಯ ಸಭೆಯಲ್ಲಿ 1ನೇ ಎದುರುದಾರರನ್ನು ವಿಚಾರಣೆ

ಮಾಡಿದಾಗ ಅವರು ಮಾಡಿರುವ ಅವ್ಯವಹಾರವನ್ನು ಒಪ್ಪಿಕೊಂಡಿರುತ್ತಾರೆ ಎಂದು ದೂರುದಾರರು ತಿಳಿಸಿರುತ್ತಾರೆ. ಸದರಿ ರಶೀದಿಯನ್ನು ಪಂಚಾಯಿತಿಯ ಯಾವುದೇ ದಾಖಲೆಗಳಲ್ಲಿ ದಾಖಲಿಸದೆ ಹಣವನ್ನು ಸಹ ಪಂಚಾಯಿತಿ ಖಾತೆಗೆ ಜಮಾ ಮಾಡದೇ ಸದರಿ ರಶೀದಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಆಪಾದಿಸಿರುತ್ತಾರೆ. ಆದುದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

3. 1ನೇ ಎದುರುದಾರರು ದಿ. 03/10/2018ರಂದು ತನ್ನ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ದೂರಿಗೆ ಸಂಬಂಧಿಸಿದಂತೆ ದಿ. 14/11/2017ರ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ 1ನೇ ಎದುರುದಾರರು ಅಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ 2ನೇ ಎದುರುದಾರರ ನಿರ್ದೇಶನದಂತೆ ರಶೀದಿ ಹಾಕಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ 1ನೇ ಎದುರುದಾರರು ಸ್ವತಃ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ. ಅಲ್ಲದೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನಿರ್ದೇಶನದಂತೆ ಅವರೇ ನೀಡಿದ ರಶೀದಿ ಪುಸ್ತಕದಲ್ಲಿ ಸದರಿ ಮೇಲ್ಕಂಡ ಸ್ವತ್ತಿಗೆ ರಶೀದಿಯನ್ನು ನೀಡಿ, ರೂ. 60,000/-ಗಳಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ಹೆಸರಿನಲ್ಲಿ ಡಿ.ಡಿ. ಪಡೆದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಿರುತ್ತೇನೆ. ಈ ಡಿ.ಡಿ. ಆಧಾರದ ಮೇಲೆ ಪಂಚಾಯತ್ ಅಬಿವೃದ್ಧಿ ಅಧಿಕಾರಿಯು ಜಮೀನಿನ ಮಾಲೀಕರಾದ ಶ್ರೀ. ಕೆ.ವಿ. ಜಗದೀಶ್ ಬಿನ್. ಕೆ.ವಿ.ಬೈರಣ್ಣ ಇವರಿಗೆ ಮನೆ (ರೂರಲ್ ಗೋಡೌನ್) ನಿರ್ಮಿಸಿಕೊಳ್ಳಲು ಲೈಸೆನ್ಸ್ ನಂ. 39 ದಿ. 02/03/2017ರಂದು ಲೈಸೆನ್ಸ್‌ನ್ನು ಅದೇ ದಿನ ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಡಿ.ಡಿಯನ್ನು ನಗಧೀಕರಿಸಿ ಗ್ರಾಮ

ಪಂಚಾಯಿತಿಯ ನಗದು ಪುಸ್ತಕ ನಮೂದಿಸುವ ಕೆಲಸ 1ನೇ ಎದುರುದಾರರದ್ದಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. 1ನೇ ಎದುರುದಾರರು ಯಾವುದೇ ಹಣವನ್ನು ತಾನು ದುರುಪಯೋಗ ಪಡಿಸಿಕೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

4. ದಿ. 03/05/2019ರಂದು 2ನೇ ಎದುರುದಾರರು ತನ್ನ ಆಕ್ಷೇಪಣೆಯನ್ನು ಸಲ್ಲಿಸಿದ್ದು, ತಾನು ದಿ. 14/07/2016 ರಿಂದ 28/04/2017ರವರೆಗೆ ಟಿ.ಬೇಗೂರು ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಈ ಅವಧಿಯಲ್ಲಿ ದೂರಿನಲ್ಲಿ ನಮೂದಿಸಿರುವ ವಿಚಾರಗಳು ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. 2ನೇ ಎದುರುದಾರರು ಕರ್ತವ್ಯ ನಿರ್ವಹಿಸುವ ಅವಧಿಯಲ್ಲಿ ಸದರಿ ದೂರಿನಲ್ಲಿ ತಿಳಿಸಿರುವ ಶ್ರೀ. ಜಗದೀಶ್‌ರವರ ಭೂ ಪರಿವರ್ತಿತ ಜಮೀನಿಗೆ ಖಾತೆ ದಾಖಲು ಮಾಡಲು ಗ್ರಾಮ ಪಂಚಾಯಿತಿಗೆ ಅರ್ಜಿ ನೀಡಿದ್ದು, ಈ ಸಂಬಂಧ ಸದರಿ ಅರ್ಜಿಯನ್ನು ನಿಯಮಾನುಸಾರ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಒಪ್ಪಿಗೆಯನ್ನು ಪಡೆಯಲಾಗಿದ್ದು, ಆದರೆ ನಂತರದ ದಿನಗಳಲ್ಲಿ ತಾನು ಸದರಿ ಗ್ರಾಮ ಪಂಚಾಯಿತಿಯಿಂದ ದಿ. 28/04/2017ರಂದು ವರ್ಗಾವಣೆಯಾದ ಮೇಲೆ ಸದರಿ ಅರ್ಜಿಯನ್ನು ಮುಂದುವರೆಸಲು ಸಾಧ್ಯವಾಗಿರುವುದಿಲ್ಲ ಬದಲಿಗೆ ಎಲ್ಲಾ ಕಡತಗಳನ್ನು ನಂತರ ಬಂದ ಅಧಿಕಾರಿಗೆ ಹಸ್ತಾಂತರಿಸಿರುತ್ತೇನೆ ಎಂದು ತಿಳಿಸಿರುತ್ತಾರೆ. ಆದುದರಿಂದ ತನ್ನನ್ನು ಈ ಪ್ರಕರಣದಿಂದ ಕೈಬಿಡಬೇಕೆಂದು ಕೋರಿರುತ್ತಾರೆ.

5. ಈ ಪ್ರಕರಣದಲ್ಲಿ ದೂರುದಾರರು ಹಾಜರು ಮಾಡಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಿ. 02/03/2017ರಂದು ಶ್ರೀ. ಕೆ.ವಿ. ಜಗದೀಶ್‌ರವರಿಗೆ ರೂರಲ್

ಗೋಡೌನ್ ಕಟ್ಟಲು ಅನುಮತಿ ಪತ್ರವನ್ನು 2ನೇ ಎದುರುದಾರರು ನೀಡಿರುವುದು ಕಂಡು ಬಂದಿರುತ್ತದೆ. ಅದೇ ರೀತಿ ಟಿ.ಬೇಗೂರು ಪಂಚಾಯಿತಿಯಿಂದ ಶ್ರೀ. ಕೆ.ವಿ.ಜಗದೀಶ್‌ರವರಿಗೆ ಕಟ್ಟಡ ಲೈಸೆನ್ಸ್ ಫೀ ಹಾಗೂ ಇತರ ತೆರಿಗೆಗಳ ಬಾಬ್ತು ಒಟ್ಟು 60,000/-ರೂಪಾಯಿಗೆ ರಶೀದಿ ನಂ. 683651ರಂತೆ ರಶೀದಿ ನೀಡಿರುವುದು ಕಂಡು ಬಂದಿರುತ್ತದೆ. 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಶ್ರೀ. ಜಗದೀಶ್‌ರವರು ಭೂ ಪರಿವರ್ತಿತ ಜಮೀನಿನ ಖಾತೆ ದಾಖಲು ಮಾಡಲು ಗ್ರಾಮ ಪಂಚಾಯಿತಿಗೆ ಅರ್ಜಿ ನೀಡಿರುತ್ತಾರೆ. ಸದರಿ ಅರ್ಜಿಯನ್ನು ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಗಿತ್ತು ನಂತರ ತಾನು ವರ್ಗಾವಣೆಯಾದ ಕಾರಣ ಕಡತವನ್ನು ನಂತರ ಬಂದ ಅಧಿಕಾರಿಗೆ ವರ್ಗಾಯಿಸಿರುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ ತನ್ನ ಆಕ್ಷೇಪಣೆಯಲ್ಲಿ ಸದರಿ ಆಸ್ತಿಗೆ ಪಂಚಾಯಿತಿಯಲ್ಲಿ ತನ್ನ ಅವಧಿಯಲ್ಲಿ ಖಾತಾ ದಾಖಲು ಮಾಡಿರುವ ಬಗ್ಗೆ ತಿಳಿಸಿರುವುದಿಲ್ಲ. ಆದರೆ 1ನೇ ಎದುರುದಾರರ ಆಕ್ಷೇಪಣೆಯ ಪ್ರಕಾರ ಸದರಿ ಶ್ರೀ. ಕೆ.ವಿ.ಜಗದೀಶ್‌ರವರು ಡಿ.ಡಿ. ನೀಡಿದ ದಿನಾಂಕ 02/03/2017ರಂದೇ 2ನೇ ಎದುರುದಾರರು ಸದರಿ ಶ್ರೀ. ಜಗದೀಶ್‌ರವರಿಗೆ ಕಟ್ಟಡ ಕಟ್ಟಲು ಪರವಾನಿಗೆ ನೀಡಿರುತ್ತಾರೆ ಎಂದು ಕಂಡು ಬಂದಿರುತ್ತದೆ. ಸದರಿ ಸೃಷ್ಟಿಸಿದ ದಾಖಲೆ ಎಂದು ಹೇಳಲಾಗಿರುವ ರಶೀದಿಯಲ್ಲಿ ಖಾತಾ ನಂಬರ್ 96/299/57/08 ಎಂದು ನಮೂದಿಸಿರುವುದು ಕಂಡು ಬಂದಿರುತ್ತದೆ. ಆದರೆ ಎದುರುದಾರರು ಸದರಿ ಖಾತಾ ನಂಬರ್ ನೈಜ ಖಾತೆಯಾಗಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ. ಸದರಿ ವಿಚಾರವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಪಂಚಾಯಿತಿಯಲ್ಲಿ ಖಾತಾ ದಾಖಲು ಮಾಡಲು ಅರ್ಜಿ ನೀಡಿದ ದಿನದಂದೇ 2ನೇ ಎದುರುದಾರರು ಶ್ರೀ. ಕೆ.ವಿ.ಜಗದೀಶ್‌ರವರಿಗೆ ಕಟ್ಟಡ ಕಟ್ಟಲು ಅನುಮತಿ ಪತ್ರ

ನೀಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ದೂರುದಾರರ ಪ್ರಕಾರ ಸದರಿ ರಶೀದಿಯು ಎದುರುದಾರರು ಸೃಷ್ಟಿ ಮಾಡಿರುವ ರಶೀದಿಯಾಗಿದ್ದು, ಈ ಬಗ್ಗೆ ಪಂಚಾಯಿತಿಯ ಅಧ್ಯಕ್ಷರು ಮತ್ತು ಸದಸ್ಯರ ಗಮನಕ್ಕೆ ತರದೆ ದಾಖಲೆಗಳನ್ನು ಸೃಷ್ಟಿಸಿ ಸದರಿ ಹಣವನ್ನು ದುರುಪಯೋಗ ಮಾಡಿರುತ್ತಾರೆ ಎಂದು ಆಪಾದಿಸಿರುತ್ತಾರೆ. ಎದುರುದಾರರು ಸದರಿ 60,000/–ರೂಪಾಯಿಗಳನ್ನು ಪಂಚಾಯತ್ ದಾಖಲುಗಳಲ್ಲಿ ನಮೂದು ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ.

**6. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 313 ಗ್ರಾಪಂಕಾ 2013, ಬೆಂಗಳೂರು ದಿ. 03/03/2014ರಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.**

1. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಗ್ರಾಮ ಪಂಚಾಯಿತಿ ಮಟ್ಟದ ನೌಕರನಾಗಿದ್ದು, ಆತನು ಕರ್ತವ್ಯ ನಿರ್ವಹಿಸುವ ಗ್ರಾಮ ಪಂಚಾಇತಿ ಆಡಳಿತ ವ್ಯಾಪ್ತಿಗೆ ಸಂಬಂಧಪಟ್ಟ ಕರ್ತವ್ಯಗಳನ್ನು ಹಾಗೂ ಯೋಜನೆಗಳನ್ನು ನಿರ್ವಹಿಸಲು ಬದ್ಧನಾಗಿರತಕ್ಕದ್ದು.

2. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ,, 1993ರಡಿಯಲ್ಲಿ ರಚಿಸಲಾದ ಯಾವುದೇ ನಿಯಮಗಳ ಅಥವಾ ಉಪವಿಧಿಗಳ ಮೂಲಕ ಅಥವಾ ಅಡಿಯಲ್ಲಿ ಅವನಿಗೆ ವಿಧಿಸಲಾದ ಎಲ್ಲಾ ಕರ್ತವ್ಯಗಳು/ಅಧಿಕಾರಿಗಳನ್ನು ನಿರ್ವಹಿಸತಕ್ಕದ್ದು.

3. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 58ರಂತೆ ಗ್ರಾಮ ಪಂಚಾಯಿತಿಗೆ ಅನುಸೂಚಿ 1ರಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳ ಅನುಷ್ಠಾನಕ್ಕೆ ಜವಾಬ್ದಾರನಾಗಿರತಕ್ಕದ್ದು.

4. ಗ್ರಾಮ ಪಂಚಾಯತ್ ನಿಧಿಯ ಡ್ರಾಯಿಂಗ್ ಮತ್ತರು ಡಿಸ್‌ಬರ್ಸಿಂಗ್ ಆಫೀಸರ್ (Drawing and Disbursing Officer) ಆಗಿ ಕರ್ತವ್ಯ ನಿರ್ವಹಿಸತಕ್ಕದ್ದು.

5. ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆ, ವಿಶೇಷ ಸಭೆ ನಡೆಸುವುದು ಹಾಗೂ ನಿರ್ಣಯಗಳನ್ನು ಜಾರಿಗೊಳಿಸುವುದು.

6. ಗ್ರಾಮ ಪಂಚಾಯಿತಿಯ ಲೆಕ್ಕಗಳ ಮತ್ತು ಬಜೆಟ್ ಮಂಡನೆ ಮಾಡಲು ಸಂಪೂರ್ಣ ಜವಾಬ್ದಾರಿ ಹೊಂದಿರತಕ್ಕದ್ದು.

7. ಗ್ರಾಮ ಪಂಚಾಯತ್‌ನ ತೆರಿಗೆ ವಸೂಲಾತಿ ಮೇಲ್ವಿಚಾರಣೆ.

8. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳ ಸಮರ್ಪಕ ಮತ್ತು ಸಕಾಲಿಕ ಅನುಷ್ಠಾನ.

9. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಮಾಸಿಕ ಪ್ರಗತಿ ವರದಿ ಸಲ್ಲಿಸುವುದು.

10. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನ, ಮೇಲ್ವಿಚಾರಣೆ, ಎಂ.ಐ.ಎಸ್ ನಿರ್ವಹಣೆ ಹಾಗೂ ಸದರಿ ಯೋಜನೆಯಡಿ ಹೊರಡಿಸುವ ಸರ್ಕಾರದ ಎಲ್ಲಾ ನಿರ್ದೇಶನಗಳನ್ನು ಪಾಲಿಸುವುದು.

11. ಪಂಚತಂತ್ರ ತಂತ್ರಾಂಶ, ಇ-ಪಂಚಾಯತ್ ಮತ್ತು ಇ-ಸ್ವತ್ತು ಮೊದಲಾದ ಕಂಪ್ಯೂಟರ್ ಆಧಾರಿತ ಕಾರ್ಯಕ್ರಮಗಳ ನಿರ್ವಹಣೆ.

12. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಇಲಾಕೆಗಳ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮಾಹಿತಿ ಕ್ರೋಢೀಕರಣ ಹಾಗೂ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆ.

13. 2005ರ ಮಾಹಿತಿ ಹಕ್ಕು ಅಧಿನಿಮಯದಡಿ ಮೇಲ್ಮನವಿ ಪ್ರಾಧಿಕಾರವಾಗಿ ಕರ್ತವ್ಯ ನಿರ್ವಹಣೆ.

14. ಸಕಾಲ ಸೇವೆಗಳ ನಿರ್ವಹಣೆ.

15. ಕಾಲಕಾಲಕ್ಕೆ ಸರ್ಕಾರದಿಂದ ವಹಿಸಬಹುದಾದ ಇತರ ಕಾರ್ಯಗಳು.

ಸದರಿ ಆದೇಶದ ಪ್ರಕಾರ ಗ್ರಾಮ ಪಂಚಾಯಿತಿಯ ತೆರಿಗೆ ವಸೂಲಾತಿ ಮೇಲ್ವಿಚಾರಣೆ ನಡೆಸುವುದು ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

**7. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 47 ಗ್ರಾಪಂಸಿ 2016 ಬೆಂಗಳೂರು, ದಿ. 19/05/2016ರಂತೆ ರಂತೆ ಬಿಲ್ ಕಲೆಕ್ಟರ್ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.**

1. ಗ್ರಾಮ ಪಂಚಾಯಿತಿಗಳ ತೆರಿಗೆ ವಸೂಲಿ ಮಾಡತಕ್ಕದ್ದು.

2. ದಿನವಹಿ ವಸೂಲಾತಿ ಪುಸ್ತಕ, **ತೆರಿಗೆ ನಿರ್ಧರಣೆ ರಿಜಿಸ್ಟರ್,** ನೀರಿನ ದರಗಳ ಬೇಡಿಕೆ ಮತ್ತು **ವಸೂಲಾತಿ ರಿಜಿಸ್ಟರ್ ನಿರ್ವಹಣೆ**.

3. ಭೂಮಿ ಮತ್ತು ಕಟ್ಟಡಗಳ ತೆರಿಗೆಗಳ ಬೇಡಿಕೆ ಮತ್ತು ವಸೂಲಾತಿ ರಿಜಿಸ್ಟರ್, ವಾಹನಗಳ ಮೇಲಣ ಸುಂಕ ಬೇಡಿಕೆ ಮತ್ತು ವಸೂಲಾತಿ ರಿಜಿಸ್ಟರ್ ನಿರ್ವಹಣೆ.

4. ಮನೋರಂಜನೆ ತೆರಿಗೆಗಳ ಬೇಡಿಕೆ ರಿಜಿಸ್ಟರ್ ಮತ್ತು ದನಗಳ ದೊಡ್ಡಿ ರಿಜಿಸ್ಟರ್ ಹಾಗೂ ಸಂಬಂಧಪಟ್ಟ ರಿಜಿಸ್ಟರ್‌ಗಳ ನಿರ್ವಹಣೆ.

ಸದರಿ ಸರ್ಕಾರದ ಆದೇಶದಂತೆ ತೆರಿಗೆ ನಿರ್ಧರಣಾ ರಿಜಿಸ್ಟರ್‌ನ ಮತ್ತು ತೆರಿಗೆ ವಸೂಲಾತಿ ರಿಜಿಸ್ಟರ್ ನಿರ್ವಹಣೆ ಮಾಡುವುದು ಬಿಲ್ ಕಲೆಕ್ಟರ್‌ನ ಕರ್ತವ್ಯವಾಗಿರುತ್ತದೆ. ಆದರೆ ಎದುರುದಾರರು ಸದರಿ ಶ್ರೀ. ಕೆ.ವಿ.ಜಗದೀಶ್‌ರವರಿಂದ ಪಡೆದಿರುವ ಡಿ.ಡಿ. 60,000/-ರೂಗಳನ್ನು ಪಂಚಾಯತ್ ತೆರಿಗೆ ವಸೂಲಾತಿ ರಿಜಿಸ್ಟರ್‌ನಲ್ಲಿ ನಮೂದು ಮಾಡಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು

ಮಾಡಿರುವುದಿಲ್ಲ. ಆದರೆ ಕಟ್ಟಡ ಲೈಸೆನ್ಸ್ ಹಾಗೂ ಇತರ ತೆರಿಗೆಯ ಬಾಬ್ತು ಒಟ್ಟು 60,000/-ರೂಪಾಯಿಗೆ ಶ್ರೀ. ಕೆ.ವಿ. ಜಗದೀಶ್‌ರವರಿಗೆ ರಶೀದಿ ನೀಡಿ ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. 1ನೇ ಎದುರುದಾರರ ಪ್ರಕಾರ 2ನೇ ಎದುರುದಾರರು ನೀಡಿರುವ ರಶೀದಿ ಪುಸ್ತಕದಲ್ಲಿ ಸದರಿ 60,000/-ರೂಪಾಯಿಗಳನ್ನು ನಮೂದು ಮಾಡಿರುವುದಾಗಿ 1ನೇ ಎದುರುದಾರರು ತಿಳಿಸಿರುತ್ತಾರೆ. 1ನೇ ಎದುರುದಾರರು ಹಾಜರು ಮಾಡಿರುವ ಪರವಾನಿಗೆಯನ್ನು ಪರಿಶೀಲಿಸಿದಾಗ ಸದರಿ ಡಿ.ಡಿಯನ್ನು ಪಡೆದುಕೊಂಡ ದಿನದಂದೇ 2ನೇ ಎದುರುದಾರರು ಶ್ರೀ. ಕೆ.ವಿ.ಜಗದೀಶ್‌ರವರಿಗೆ ರೂರಲ್ ಗೋಡೌನ್ ಕಟ್ಟಡ ಕಟ್ಟಲು ಅನುಮತಿ ಪತ್ರವನ್ನು ದಿ. 02/03/2015ರಂದು ನೀಡಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಆದರೆ 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಸದರಿ ಪರವಾನಿಗೆಯನ್ನು ನೀಡಿರುವ ವಿಚಾರವನ್ನು ಮರೆ ಮಾಚಿರುತ್ತಾರೆ.

8. ದಿ. 14/11/2017ರ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಟಿ.ಬೇಗೂರು ಗ್ರಾಮ ಪಂಚಾಯಿತಿಯಲ್ಲಿ 2ನೇ ಎದುರುದಾರರು ಪಿ.ಡಿ.ಓ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಸಮಯದಲ್ಲಿ ಮಾಳೋನಗತಿಯಹಳ್ಳಿ ಸರ್ವೆ ನಂ. 57/8ರಲ್ಲಿ 2 ಎಕರೆ ಜಮೀನಿಗೆ ಭೂ ಪರಿವರ್ತನೆಯಾಗಿದ್ದು ಈ ವಿಚಾರವಾಗಿ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಪಂಚಾಯತ್‌ಯಿಂದ ಅನುಮೋದನೆ ಪಡೆಯದೆ ದಿ. 14/12/2017ರವರೆಗೆ ಯಾವುದೇ ಖಾತೆ ದಾಖಲಾಗಿರದಿದ್ದರೂ ಲೈಸೆನ್ಸ್ ಮತ್ತು ನಕಾಶೆಯನ್ನು ಅನುಮೋದನೆ ಮಾಡಿಕೊಟ್ಟಿರುತ್ತಾರೆ ಮತ್ತು 60,000/-ರೂಪಾಯಿಗಳ ಕಂದಾಯ ರಶೀದಿಯನ್ನು ನೀಡಿ ಪಂಚಾಯತ್ ಖಾತೆಗೆ ಹಣ ಜಮಾ ಮಾಡದೇ ನಕಲು ದಾಖಲೆಯನ್ನು ಸೃಷ್ಟಿ ಮಾಡಿ ಕೊಟ್ಟಿರುತ್ತಾರೆ

ಆದುದರಿಂದ ಈ ವಿಷಯವನ್ನು ಮೇಲ್ಮಟ್ಟದ ಅಧಿಕಾರಿಗಳಿಂದ ಪರಿಶೀಲಿಸಲು ಮತ್ತು ಸದರಿಯವರ ಮೇಲೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಿರುವುದು ಕಂಡುಬಂದಿರುತ್ತದೆ.

9. ದಿ. 25/11/2017ರಂದು ನಡೆದ ತುರ್ತು ಸಭೆಯಲ್ಲಿ 1ನೇ ಎದುರುದಾರರನ್ನು ಸೇವೆಯಿಂದ ಅಮಾನತ್ತು ಮಾಡಿದ ಬಗ್ಗೆ 1ನೇ ಎದುರುದಾರರು ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ರವರಿಗೆ ಪ್ರಕರಣ ಸಂಖ್ಯೆ: ಬೆಂಗ್ರಾಜಿಪಂ/ಸಿ1/ಸಿ6/176/2018-19ರಂತೆ ಮೇಲ್ಮನವಿಯನ್ನು ಸಲ್ಲಿಸಿ ದಿ. 25/11/2017ರ ಗ್ರಾಮ ಪಂಚಾಯಿತಿ ತುರ್ತು ಸಭೆಯಲ್ಲಿ 1ನೇ ಎದುರುದಾರರನ್ನು ಕರ್ತವ್ಯದಿಂದ ವಜಾ ಮಾಡಲು ತೆಗೆದುಕೊಂಡ ನಿರ್ಣಯವನ್ನು ರದ್ದುಪಡಿಸಲು ಕೋರಿರುತ್ತಾರೆ. ಸದರಿ ಮೇಲ್ಮನವಿಯಲ್ಲಿ 1ನೇ ಎದುರುದಾರರನ್ನು ವಜಾ ಮಾಡಲು ತೆಗೆದುಕೊಂಡಿರುವ ನಿರ್ಣಯವು ಕಾನೂನು ಬಾಹಿರವಾಗಿದ್ದು, ಸದರಿ ನಿರ್ಣಯವನ್ನು ರದ್ದುಗೊಳಿಸಿ 1ನೇ ಎದುರುದಾರರನ್ನು ಕರ್ತವ್ಯಕ್ಕೆ ತೆಗೆದುಕೊಳ್ಳಲು 2ನೇ ಎದುರುದಾರರಿಗೆ ಆದೇಶಿಸಲಾಗಿರುತ್ತದೆ. ಸದರಿ ಮೇಲ್ಮನವಿಯು ಕೇವಲ 1ನೇ ಎದುರುದಾರರನ್ನು ವಜಾ ಮಾಡಿರುವ ಬಗ್ಗೆ ಗ್ರಾಮ ಪಂಚಾಯಿತಿಯಲ್ಲಿ ತೆಗೆದುಕೊಂಡ ನಿರ್ಣಯಕ್ಕೆ ಸಂಬಂಧಿಸಿದ್ದು, ಆದರೆ ಸದರಿ ಮೇಲ್ಮನವಿಯು 1ನೇ ಎದುರುದಾರರು ಗ್ರಾಮ ಪಂಚಾಯಿತಿಯಲ್ಲಿ ಮಾಡಿರುವ ಅವ್ಯವಹಾರಕ್ಕೆ ಸಂಬಂಧಿಸಿರುವುದಿಲ್ಲ. 1ನೇ ಎದುರುದಾರರು ತೆರಿಗೆ ನಿರ್ಧರಣಾ ರಿಜಿಸ್ಟರ್‌ನ್ನು ಮತ್ತು ವಸೂಲಾತಿ ರಿಜಿಸ್ಟರ್ ನಿರ್ವಹಣೆ ಮಾಡುವ ಕರ್ತವ್ಯವನ್ನು ಹೊಂದಿದ್ದರೂ ಶ್ರೀ. ಕೆ.ವಿ. ಜಗದೀಶ್‌ರವರು ತೆರಿಗೆ ಬಾಬ್ತು ನೀಡಿರುವ ಹಣಕ್ಕೆ ರಶೀದಿಯನ್ನು ನೀಡಿದ್ದರೂ ಸಹ ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ನಮೂದು

ಮಾಡದೇ ಅವ್ಯವಹಾರಗಳನ್ನು ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. 2ನೇ ಎದುರುದಾರರು ಗ್ರಾಮ ಪಂಚಾಯಿತಿಯ ತೆರಿಗೆ ವಸೂಲಾತಿ ಮೇಲ್ವಿಚಾರಣೆಯನ್ನು ಸಮರ್ಪಕವಾಗಿ ನಿರ್ವಹಿಸದೇ ಶ್ರೀ. ಕೆ.ವಿ.ಜಗದೀಶ್‌ರವರ ಹೆಸರಿಗೆ ಪಂಚಾಯಿತಿಯಲ್ಲಿ ಖಾತೆ ನಮೂದು ಆಗದೇ ಇದ್ದರೂ ನಿಯಮ ಬಾಹಿರವಾಗಿ ಕಟ್ಟಡ ಪರವಾನಿಗೆ ನೀಡಿರುವುದು ಕಂಡು ಬಂದಿರುತ್ತದೆ. ಸದರಿ ವಿಚಾರವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ 1 ಮತ್ತು 2ನೇ ಎದುರುದಾರರು ಶಾಮೀಲಾಗಿ ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

10. ಹೀಗಾಗಿ, ಮೇಲಿನ ಕಾರಣ ಹಾಗೂ ಕಡತವನ್ನು ಪರಿಶೀಲಿಸಿದಾಗ 1 ಮತ್ತು 2ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿ, ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಕಂಡುಬಂದಿರುತ್ತದೆ. ಆದುದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರ ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ 1ನೇ ಎದುರುದಾರರಾದ ಶ್ರೀ. ಸಿದ್ದರಾಜು ಬಿ.ಎನ್, ಕರವಸೂಲಿಗಾರರು ಮತ್ತು 2ನೇ ಎದುರುದಾರರಾದ ಶ್ರೀ. ಕುಮಾರ್, ಪಿ.ಡಿ.ಓರವರುಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ

ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11. ಮುಂದುವರೆದು, ಎದುರುದಾರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ನಿರ್ದೇಶಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

17/8/21

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-2,
14/8/20 ಕರ್ನಾಟಕ ರಾಜ್ಯ.